**ದಿನಾಂಕಃ 05-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.**

**ಮುಖ್ಯವಿಚಾರಣೆಃ ಪ್ರತಿವಾದಿ 4 ರ ಪರ ಶ್ರೀ ಬಿ ಎಸ್ ಎನ್ ವಕೀಲರಿಂದಃ**

ನಾನು ಈ ದಾವೆಯಲ್ಲಿ 4 ನೇ ಪ್ರತಿವಾದಿ ಪರ ಸಾಕ್ಷಿದಾರ ಇದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ಸಾಕ್ಷಿಗೆ ನಿಡಿ- 2 ನ್ನು ತೋರಿಸಲಾಗಿ ಸಾಕ್ಷಿಯು ನಿಡಿ- 2 ರಲ್ಲಿ ತಮ್ಮ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ- 2(ಎಲ್) ಮತ್ತು (ಎಂ) ಎಂದು ಗುರುತಿಸಲಾಯಿತು. ನಿಡಿ- 2 ರಲ್ಲಿ ಸಾಕ್ಷಿಯು ಶಕುಂತಲಮ್ಮ ಇವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಡಿ- 2(ಎ) ಯಿಂದ (ಇ) ಎಂದು ಗುರುತಿಸಲಾಗಿರುತ್ತದೆ. ನಿಡಿ- 2 ಕ್ಕೆ ನನ್ನ ಜೊತೆ ಮಂಜುನಾಥ ಎಂಬುವರು ಸಹಿ ಮಾಡಿರುತ್ತಾರೆ. ನಿಡಿ- 2 ನ್ನು ಎನ್.ಎ.ವಸಂತ ಇವರಿಗೆ ಶಕುಂತಲಮ್ಮ ಬರೆದುಕೊಟ್ಟಿರುತ್ತಾರೆ. ಸಾಕ್ಷಿಯು ನಿಡಿ- 2 ರಲ್ಲಿ ವಸಂತ ಇವರ ಸಹಿಯನ್ನು ನೋಡಿ ಗುರುತಿಸಿದ್ದು ಸದರಿಯವರ ಸಹಿಗಳನ್ನು ಈಗಾಗಲೇ ನಿಡಿ- 2(ಎಫ್) ಯಿಂದ (ಕೆ) ಎಂದು ಗುರುತಿಸಲಾಗಿರುತ್ತದೆ. ನಿಡಿ- 2 ರಲ್ಲಿ ಶಕುಂತಲಮ್ಮ ಇವರು ತಮ್ಮ ಹೆಬ್ಬೆಟ್ಟನ್ನು ಹಾಕಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ವಾದಿ ಮತ್ತು ಪ್ರತಿವಾದಿ 1 ರಿಂದ 3 ಹಾಗೂ 5 ರಿಂದ 7 ರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ